ಶ್ರೀ ಬಿ.ಟಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷಿಣಿಯರೆ, ನನ್ನ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಿರುವಂಥ ಪ್ರಶ್ನೆ ಇದು. ಬಿ.ಟಿ. ಅಂಡ್ ಕಂಪೆನಿಯವರಿಗೆ ಲೀಸನ್ನು ಎಕ್ಸ್‌ಟೆಂಡ್ ಮಾಡುವುದರ ಬಗ್ಗೆ ಉತ್ತರವನ್ನು ಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈ ವಿಚಾರ ಈ ಪ್ರಶ್ನೆಯಲ್ಲಿರಲಿಲ್ಲವೆಂದು ನಾನು ಹೇಳಲಿಲ್ಲ. ಇದನ್ನು ತಾವು ಇವತ್ತು ನನ್ನ ಗಮನಕ್ಕೆ ತಂದಿದ್ದೀರಿ. ಕಾಗದಪತ್ರಗಳನ್ನು ತರಿಸಿ ಪರಿಶೀಲನೆ ಮಾಡುತ್ತೇನೆ. ಇದು ನನ್ನ ಕಕ್ಷೆಯಲ್ಲಿ ಬರುವಹಾಗೆ ಇದ್ದರೆ, ಕೂಡಲೇ ಲಾ ಡಿಪಾರ್ಟ್‌ಮೆಂಟ್‌ಗೆ ಬರೆದು ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಆ ಕ್ರಮವನ್ನು ಅವರ ಮೇಲೆ ಜರುಗಿಸುತ್ತೇವೆ.

ಉಪಾಧ್ಯಕ್ಷಿಣಿಯವರು : ಈಗ ನಿಯಮ 334ರ ಮೇಲೆ ಬರುವ ವಿಷಯಗಳು. ಹನುಮಗೌಡ ಪಾಟೀಲ್‌ರವರು ಮಾತನಾಡಬಹುದು.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷಿಣೀಯವರೇ, ನಾನು ಮಲ್ಪೆ ವಿಷಯದ ಬಗ್ಗೆ ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆ. ಅದಕ್ಕೆ ಪಟ್ಟಿಯಲ್ಲಿ ಬರುತ್ತದೆ. ತಮಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದರು.

ಉಪಾಧ್ಯಕ್ಷಿಣಿಯವರು : ಇನ್ನೂ ಮೂರು ದಿವಸ ಸದನ ಇದೆ. ಯಾವತ್ತಾದರೂ ತೆಗೆದುಕೊಳ್ಳೋಣ.

ಶ್ರೀ ಸಿ. ಭೈರೇಗೌಡ : ಅದನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ರಾಯಚೂರು ಜಿಲ್ಲೆಯ ಕೊಪ್ಪಳದ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆ. ಕಾಲಿಂಗ್ ಅಟೆನ್‌ಷನ್ ಬರದಿದ್ದರೂ ನೀವು ಇದನ್ನು ರೇಜ್ ಮಾಡಬಹುದು, ಇದನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತರಬಹುದು ಎಂದು ಅನುಮತಿ ಕೊಟ್ಟಮೇಲೆ ನಾನು ಮಾತನಾಡುತ್ತಿರುವುದು.

ಉಪಾಧ್ಯಕ್ಷಿಣಿಯವರು : ನಿಮಯ 334ರ ಮೇಲೆ ಹಾಗೂ ಪೇಪರ್ಸ್ ಲೇ ಮಾಡುವುದರ ಬಗ್ಗೆ ಚರ್ಚೆಯಾದ ಮೇಲೆ ನೋಡೋಣ.

ಶ್ರೀ ಬಸವರಾಜ ರಾಯರೆಡ್ಡಿ : ಇದು ಬಹಳ ಪ್ರಾಮುಖ್ಯವಾದ ವಿಷಯ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಸಿಚ್ಯುಯೇಷನ್ ಕ್ರಿಯೇಟ್ ಆಗಿದೆ.

ಉಪಾಧ್ಯಕ್ಷಿಣಿಯವರು : ಈಗ ನಿಯಮ 334ರ ಮೇಲೆ ಚರ್ಚೆಯನ್ನು ಕರೆದಿದ್ದೇನೆ. ಮೊದಲು ಅದಾಗಲಿ. ಶ್ರೀ ಹನುಮಗೌಡ ಪಾಟೀಲ್. ಶ್ರೀಯುತ ಹನುಮೇಗೌಡ.

ನಿಯಮ 334ರ ಮೇರೆಗೆ

1) ಹಾಸನ ಕ್ಷೇತ್ರದ ಗವೇನಹಳ್ಳಿ ಮತ್ತು ಗೊರೂರು ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು.

ಶ್ರೀ ಹೆಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಹಾಸನ ಕ್ಷೇತ್ರದ (1) ಗವೇನಹಳ್ಳಿ ಮತ್ತು (2) ಗೊರೂರು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆ ಇರುವ ವಿಚಾರವನ್ನು ಕಳೆದ ವರ್ಷ ಶಾಸನ ಸಭೆಯಲ್ಲಿ ಪ್ರಸ್ತಾಪಿಸಲಾಗಿ ಈ ಎರಡು ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ತಕ್ಷಣ ಅಭಿವೃದ್ಧಿಪಡಿಸಿ, ಈ ಎರಡು ಗ್ರಾಮಗಳ ಕುಡಿಯುವ ನೀರಿನ ತೊಂದರೆಯನ್ನು ಹೋಗಲಾಡಿಸುವುದಾಗಿ ಮಾನ್ಯ ಸಚಿವರು ಭರವಸೆ ನೀಡಿರುತ್ತಾರೆ. ಈ ಎರಡು ಗ್ರಾಮಗಳಿಗೆ ಪಿ.ಹೆಚ್.ಇ. ಮುಖ್ಯ ಇಂಜಿನಿಯರ್‌ರವರು ಸ್ಥಳ ಪರಿಶೀಲನೆ ಮಾಡಿ

ಆದಷ್ಟು ಜಾಗ್ರತೆ ಈ ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ಅಭಿವೃದ್ಧಿಪಡಿಸುವುದಾಗಿ ಕಳಿಸಿದ್ದಾರೆ. ಅಂದಾಜು ಮತ್ತು ಪ್ಲಾನುಗಳನ್ನು ತಯಾರಿಸಿ 8 ತಿಂಗಳ ಮೇಲಾಗಿದ್ದರೂ, ಈ ಕೆಲಸಗಳು ಪ್ರಾರಂಭವಾಗದೆ ಜನರು ಕುಡಿಯುವ ನೀರಿಗಾಗಿ ವಿಪರೀತ ತೊಂದರೆಪಡುತ್ತಿರುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) : ಮಾನ್ಯ ಉಪಾಧಕ್ಷಿಣೆಯವರೇ, ಈ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

2) ಮೈಸೂರು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬೋನಸ್ ಕೊಡಲು ಮನವಿ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಸಭಾಧ್ಯಕ್ಷಿಣೆಯವರೇ, ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು 1989-90ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿ ಸುಮಾರು 5 ಲಕ್ಷ ಟನ್ನಿಗೂ ಹೆಚ್ಚು ಪ್ರಮಾಣದಲ್ಲಿ ಕಬ್ಬನ್ನು ಅರೆದಿದ್ದಾರೆ. ಈ ಸಾಲಿನಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯು ಗಣನೀಯ ಪ್ರಮಾಣದಲ್ಲಿ ಲಾಭವನ್ನು ಗಳಿಸಿದೆ. ಮಂಡ್ಯ ಜಿಲ್ಲೆಯಲ್ಲಿನ ಇತರೆ ಸಕ್ಕರೆ ಕಾರ್ಖಾನೆಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಿ ಉತ್ತಮವಾಗಿ ಲಾಭ ಗಳಿಸಿ, ತಮ್ಮ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಪ್ರೋತ್ಸಾಹಕರವಾದ ರೀತಿಯಲ್ಲಿ ಬೋನಸ್ ಹಣವನ್ನು ಕೊಟ್ಟಿದೆ.

ಆದರೆ ಮೈಸೂರು ಸಕ್ಕರೆ ಕಾರ್ಖಾನೆಯು ಲಾಭಗಳಿಸಿದ್ದರೂ ಹಾಗೂ ಬೋನಸ್‌ಹಣಕ್ಕಾಗಿ ರೈತರು ಅನೇಕ ಬಾರಿ ಮಂಡಳಿಗೆ ಮನವಿ ಮಾಡಿದ್ದರೂ ಸಹಾ, ಯಾವ ರೀತಿಯ ಪರಿಹಾರವೂ ಸಹಾ ಈವರೆಗೆ ದೊರಕಿರುವುದಿಲ್ಲ.

ಈ ತಾರತಮ್ಯದ ಧೋರಣೆಯಿಂದ ರೈತರು ನಿರಾಶರಾಗಿದ್ದಾರೆ ಹಾಗೂ ಕಳವಳ ಕಾರಿಯಾದ ಪರಿಸ್ಥಿತಿ ಇದೆ. ಈ ನಿಧಾನಗತಿಯ ತೀರ್ಮಾನದಿಂದಾಗಿ ಬರುವ ಆರ್ಥಿಕ ವರ್ಷದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಕಾರ್ಯದ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಈ ಪರಿಸ್ಥಿತಿಯ ಬಗೆಗೆ ಹಾಗೂ ರೈತರಿಗೆ ಆಗಿರುವ ತೊಂದರೆ ಬಗೆಗೆ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇವೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) (ಶ್ರೀ ಎಸ್. ಬಂಗಾರಪ್ಪ ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಸಭಾಧ್ಯಕ್ಷಿಣೆಯವರೇ, ಮೈಸೂರು ಸಕ್ಕರೆ ಕಾರ್ಖಾನೆಯ 1989-90ನೇ ಸಾಲಿನ ಲೆಕ್ಕ ಪರಿಶೋಧನೆಯು ಇನ್ನು ಮುಗಿದಿಲ್ಲದ ಕಾರಣ ಸದರಿ ವರ್ಷದಲ್ಲಿ ಲಾಭ ಮತ್ತು ನಷ್ಟ ಆಗಿದೆಯೇ ಎಂಬ ಬಗ್ಗೆ ಸಧ್ಯಕ್ಕೆ ಖಚಿತವಾಗಿ ಹೇಳಲಾಗುವುದಿಲ್ಲ.

ಆದರೂ, ಮೈಸೂರು ಸಕ್ಕರೆ ಕಾರ್ಖಾನೇಯು 1989-90ನೇ ಸಾಲಿನಲ್ಲಿ ರಾಜ್ಯ ಸಲಹಾ ಬೆಲೆಯು ನಿಗಧಿಪಡಿಸಿದ ರೂ. 325-00ಗಳಿಗೆ ಬದಲಾಗಿ ರೂ. 335-00ಗಳನ್ನು ಪ್ರತಿ ಮೆಟ್ರಿಕ್ ಟನ್ನಿಗೆ ರೈತರಿಗೆ ನೀಡಿದೆ.

ಸಕ್ಕರೆ ಕಾರ್ಖಾನೆಗೆ ಲಾಭ ಬಂದಿದೆಯೆಂದು ಖಚಿತವಾಗಿ ನಂತರವೇ ರೈತರಿಗೆ ಬೋನಸ್ ಕೊಡುವ ಪ್ರಶ್ನೆ ಉದ್ಭವಿಸುವುದು. ಸದರಿ ಕಾರ್ಖಾನೆಯ 1989-90ನೇ ಸಾಲಿನ ಲೆಕ್ಕ ಪರಿಶೋಧನೆಯು 1991ನೇ ಮಾರ್ಚಿ ಅಂತ್ಯದಲ್ಲಿ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ.

ಸದರಿ ಕಾರ್ಖಾನೆಯು ದಿನಾಂಕ 31.3.89ರ ಅಂತ್ಯದವರೆವಿಗೂ ನಷ್ಟದಲ್ಲಿತ್ತು.